ॐ ISSN 2250-1711

सत्यं ज्ञानमनन्तम्

# Journal of Veda Saṁskṛta Academy

## A National Refereed Research Journal

मूल्याङ्किता राष्ट्रियसंशोधनपत्रिका

Volume : XII
July to December - 2018

*Edited by the Director :*

**Dr. Gopalkrishna Hegde**

Jyotishashastra-Dharmashastra Vidwan

**VEDA SAMSKRITA ACADEMY (R.)**
Kalkod Road, Hegde - 581330, KUMTA, Uttara Kannada, Karnataka.

ISSN 2250-1711

॥ सत्यं ज्ञानमनन्तम् ॥

# JOURNAL OF VEDA SAMSKRITA ACADEMY

A NATIONAL REFEREED RESEARCH JOURNAL

मूल्याङ्किता राष्ट्रियसंशोधनपत्रिका

VOLUME: XII

July to December - 2018

Chief-Editor :

DR. GOPALKRISHNA HEGDE

[Jyotishashastra-Dharmashastra Vidwan]

VEDA SAMSKRITA ACADEMY (R.)

[Formerly: Veda Samskrita Prasarinee Sabha]

[No.: DR : SOR : 108 : 2003-04 Dated : 30-10-2003]

| | | |
|---|---|---|
| Title of the Journal | : | **Journal of Veda Samskrita Academy**<br>**A National Refereed Research Journal** |
| | | **मूल्याङ्किता राष्ट्रियसंशोधनपत्रिका** |
| ISSN | : | **2250-1711** |
| Editor & Publisher | : | **Dr. Gopalkrishna Hegde**<br>gopalkrishnh9@gmail.com<br>08386-260135<br>09741847399 |
| | | **Director,**<br>**Veda Samskrita Academy (Regd.)**<br>Kalkod Road, HEGDE- 581330<br>Kumta, Uttara Kannada, Karnataka |
| web site | : | **www.vedasamskritaacademy.org** |
| E-mail | : | **vedasmkac@gmail.com** |

**All rights are Reserved with the Publisher**

**" All opinion / views expressed in the research papers are of the authors only, no way they are ascribed to the Academy"**

| | | |
|---|---|---|
| Languages | : | Samskrita, Kannada, English,Hindi |
| Imprint | : | **Volume XII :**<br>**July to December–2018** |
| Paper | : | 70gsm (B2B) and Art paper – 300gsm |
| Size of the Journal | : | 21 X 14 cm |
| Number of Pages | : | 174 + 12 + 3 |
| Number of Copies | : | 100 |
| D. T. P. | : | Pavan Graphics, Hegde |
| Art works | : | Girish R. Bhat, Digital World, Kumta |
| Printing & Binding | : | Shri Krishna Mudranalaya, Hegde |
| Price | : | **Rs. 100 /- per volume** |

# विषयसूची
# CONTENTS


| | | |
|---|---|---|
| | सम्पादकीयम् | V |
| | Editorial Note | VI-VII |
| | ಮೊದಲ ಮಾತು | VIII -XI |
| | Editorial Advisory Board | XII |
| 1. | मैसूरुमहाराजश्रीमुम्मडि-कृष्णराज-ओडेयर्-कृत-ब्रह्मनिधेः धर्मशास्त्रदृष्ट्या महत्त्वचिन्तनम्<br>-विद्वान् डा. वेङ्कटरमण हेगडे (मैसूरु) | 1-9 |
| 2. | सामाजिकसन्देशे संस्कृतभारत्याः कार्यक्रमव्याप्तिः<br>-श्रीमति बङ्गारम्म के. (शिवमोग्ग) | 10-15 |
| 3. | काव्येषु राज्ञः आध्यात्मिकगुणाः<br>-डा. गणपति वि. हेगडे (मुम्बई) | 16-20 |
| 4. | ಸಿದ್ಧಾಂತಶಿಖಾಮಣಿ ಮತ್ತು ಶಿವಾಧಿಕ್ಯಶಿಖಾಮಣಿ<br>-श्रीमति पुष्पलता एम्. (बेङ्गळूरु) | 21-24 |
| 5. | वीरशैवलक्षणनिरूपणम्<br>-विद्वान् पि. बि. मोहनभैरवः (बेङ्गळूरु) | 25-31 |
| 6. | निरुक्तस्य वेदाङ्गत्वम् तस्य स्वरूपं महत्त्वं च<br>-डा. विदुषी अनुपमा बि. (बेङ्गळूरु) | 32-39 |
| 7. | ಸಂಸ್ಕೃತ ಸಾಹಿತ್ಯದಲ್ಲಿ ದೃಷ್ಟಾಂತ ಸೂಕ್ತಗಳು<br>-डा. एन्. एच्. शिवगङ्गम्म (हरिहर) | 40-45 |
| 8. | ಪಂಚಗವ್ಯದ ಮಹತ್ತ್ವ<br>-डा. नारायण के. एच्. (बेङ्गळूरु) | 46-53 |
| 9. | आयुर्वेदे मनस्स्वरूपविमर्शः<br>-डा. भाग्यलक्ष्मी वि. भट्ट (बेङ्गळूरु) | 54-62 |
| 10. | Beyond the Genre :<br>Narratives of Hybridity in Postmodern Age<br>– Avinash T. (Shivamogga) | 63-70 |
| 11. | The Personality Development the Upanishadic Text<br>-डा. बि. गोविन्दः (बेङ्गळूरु) | 71-76 |

12. साहित्यमीमांसा 77-84
–डा. मनमोहन तिवारी (मुम्बई)

13. संस्कृतसाहित्ये रूपकाणि 85-93
–डा. एस्. मल्लनगौड (बेङ्गळूरु)

14. ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರ
ಶ್ರೀಅಧ್ಯಾತ್ಮರಾಮಾಯಣದಲ್ಲಿನ ಕರ್ಮ ವಿಚಾರ 94-97
–डा. रेखादेवि एस्. एच्. (बेङ्गळूरु)

15. वैखानसागमपरिचयः 98-105
–आचार्य वेदान्तं श्रीविष्णुभट्टाचार्युलु (तिरुपतिः)

16. SANSKRIT AND SCIENCE 106-114
–डा. शोभा जि. भट्ट (शिवमोग्ग)

17. संस्कृतोत्सवस्य स्वरूपं महत्त्वं च 115-123
–विद्वान् डा. के. एम्. महदेवय्यः (मैसूरु)

18. संस्कृतवाङ्मये निरक्षरतायाः सम्प्रत्ययः 124-129
–डा. गणेश ति. पण्डितः (शृङ्गेरी)

19. मानसोल्लासः 130-133
–डा. एम्. रङ्गस्वामी (शिवमोग्ग)

20. शिवमेधप्रशंसाविषयनिरूपणम् 134-138
–विद्वान् नीलकण्ठय्य पुराणिकमठ् (बेङ्गळूरु)

21. कैवल्यसारग्रन्थोक्तरीत्या महालिङ्गस्थले स्वीकृतप्रसादि-
स्थलशिष्टोदनस्थलयोः स्वरूपम् 139-144
–विद्वान् शिवकुमारस्वामी (बेङ्गळूरु)

22. ಭಾಸನ ರೂಪಕಗಳಲ್ಲಿ ರಸ ನಿವೇಶ 145-151
–विद्वान् वनराज बि. के. (बेङ्गळूरु)

23. ज्यौतिषे बलाबलविचारः 152-157
–विद्यावारिधि दीपकभट्टः, कृ. य. घनपाटी (मैसूरु)

24. ಜಾಬಾಲ ಸತ್ಯಕಾಮ 158-166
–विद्वान् लोकेश एच्. एन्. (तुमकूरु)

25. प्रस्तुतकालिक–स्मृतिकालिकभारतीयन्यायपद्धत्योः
तुलनात्मकम् अध्ययनम् 167-173
–विदुषी डा. अनसूया रामय्या (मैसूरु)

Journal of Veda Samskrita Academy
ISSN 2250-1711
Volume XII : July to December – 2018

# ಭಾಸನ ರೂಪಕಗಳಲ್ಲಿ ರಸನಿವೇಶ

ವನರಾಜ ಬಿ.ಕೆ. (ಬೆಂಗಳೂರು)*

***ಪೀಠಿಕೆ :-**

ಸಂಸ್ಕೃತ ಭಾಷೆಯು ಸನಾತನವೂ ಶ್ರೀಮಂತವೂ ಆಗಿದೆ. ಭಾರತದ ಸಂಸ್ಕೃತಿಯ ಮೂಲಸ್ರೋತಸ್ಸುಗಳಾದ ವೇದೋಪನಿಷದಾದಿಗಳು ಹೃದ್ಯವೂ ಮಧುರ-ವೂ ಆದ ದೇವಭಾಷೆ ಸಂಸ್ಕೃತದಲ್ಲೇ ಸಾಕ್ಷಾತ್ಕರಿಸಲ್ಪಟ್ಟಿವೆ. ಇಂತಹ ಭಾರತೀಯ ಭಾಷೆಗಳ ಜೀವಾತುಭೂತವಾದ ಸಂಸ್ಕೃತಭಾಷೆಯನ್ನು ಅನೇಕ ಕವಿಗಳು ತಮ್ಮ ಅತ್ಯ-ಮೂಲ್ಯವಾದ ಸಾಹಿತ್ಯರಚನೆಯಿಂದ ಅಲಂಕರಿಸಿದ್ದಾರೆ. ಸಂಸ್ಕೃತ ಭಾಷಾಸಾಹಿತ್ಯದಲ್ಲಿ ಇಲ್ಲದೇ ಇದ್ದದ್ದು ಬೇರೆಲ್ಲೂ ಸಿಗದು ಎಂಬ ಪ್ರಶಂಸೆಯು ಸಂಸ್ಕೃತಸಾಹಿತ್ಯದ ಅಗಾಧ-ತೆಯನ್ನು ನಿರೂಪಿಸುತ್ತದೆ. ದೃಶ್ಯಶ್ರವ್ಯಕಾವ್ಯಭೂಯಿಷ್ಠವಾದ ಸಂಸ್ಕೃತಸಾಹಿತ್ಯವು ಇಂದಿಗೂ ಸಹೃದಯರನ್ನು ಅನೇಕ ರೀತಿಯಲ್ಲಿ ತರ್ಪಿಸುತ್ತಿದೆ.

ದೃಶ್ಯಕಾವ್ಯದ ಇತಿಹಾಸದಲ್ಲಿ ಅಜರಾಮರವಾದ ಕೀರ್ತಿಯನ್ನು ಪಡೆದವನು ರೂಪಕ ಸಾಮ್ರಾಜ್ಯದ ಚಕ್ರವರ್ತಿ ಮಹಾಕವಿ ಭಾಸ. ಇವನ ಅಭೂತಪೂರ್ವವಾದ ಹದಿನಾಲ್ಕು ರೂಪಕಗಳು ಸಂಸ್ಕೃತದೃಶ್ಯಸಾಹಿತ್ಯದ ಅನರ್ಘವಾದ ರತ್ನಗಳಾಗಿವೆ. ರೂಪಕಗಳೆಂದರೆ ಕೇವಲ ಪ್ರದರ್ಶನಕ್ಕಾಗಿಯೇ ಇರುವುದು ಎಂಬ ಕಲ್ಪನೆಯೊಂದಿದೆ. ಆದರೆ ರೂಪಕಗಳಲ್ಲಿ ಅಭಿನಯಕ್ಕೆ ಉಚಿತವಾದ ಅಂಶಗಳೊಂದಿಗೆ ಬಹಳಷ್ಟು ಕಾವ್ಯಾಂಶಗಳು ನಿವೇಶಿಸಲ್ಪಟ್ಟಿರುತ್ತವೆ. ಆದಕಾರಣ ರೂಪಕಗಳು ಕಾವ್ಯತತ್ತ್ವಗಳ ಆಕರಗಳೂ ಹೌದು. ಭಾಸನ ರೂಪಕಗಳಲ್ಲಿ ಅದ್ಭುತವಾದ ಕಾವ್ಯತತ್ತ್ವಗಳನ್ನು ಕಾಣಬಹುದು. ಇಂತಹ ಕಾವ್ಯತತ್ತ್ವಗಳಲ್ಲಿ ಅತ್ಯಂತ ಪ್ರಧಾನವಾದುವೇ ರಸಗಳು. ಹೇಗೆ ರಸವಿಹೀನವಾದ ಭೋಜನವು ರುಚಿಸುವುದಿಲ್ಲವೋ ಹಾಗೆಯೇ ಕಾವ್ಯರಸರಹಿತವಾದ ಕಾವ್ಯವು ಸಹೃದಯರನ್ನು ಆಹ್ಲಾದಿಸುವುದಿಲ್ಲ. ಆದಕಾರಣ ಕವಿಗಳು ರಸಗಳಿಗೆ ಅತಿಶಯವಾದ ಪ್ರಧಾನತೆಯನ್ನು ನೀಡುತ್ತಾರೆ. ಭಾಸನು ರಸರಾಜನೇ. ನವರಸಗಳನ್ನು ತನ್ನ ರೂಪಕಗಳಲ್ಲಿ ಮೇಳೈಸಿದ್ದಾನೆ. ಕೆಲವು ರಸಗಳ ಪೋಷಣೆ ಅಧಿಕವಾಗಿದ್ದರೆ ಕೆಲವು ಆನುಷಂಗಿಕವಾಗಿ ಗೌಣವಾಗಿ ಕಂಡುಬರುತ್ತವೆ. ಭಾಸನ ರೂಪಕಗಳಲ್ಲಿನ ರಸಗಳ ಜ್ಞಾನ ಪಾತ್ರಗಳನ್ನು ಅರಿಯಲು ಪೂರಕ ಎಂಬ ಕಾರಣದಿಂದ ಅವುಗಳ ಸಂಕ್ಷೇಪವಾದ ವಿಮರ್ಶೆಯನ್ನುಇಲ್ಲಿ ಮಾಡಲಾಗಿದೆ.

***ಸಂಸ್ಕೃತಭಾಷೆ :-**

ಸಂಸ್ಕೃತಭಾಷೆಯು ಅತ್ಯಂತ ಪ್ರಾಚೀನವಾದ ಭಾಷೆಯಾಗಿದ್ದು ಭಾರತೀಯ ಸಂಸ್ಕೃತಿಯ ದ್ಯೋತಕವಾಗಿದೆ.

---

*(विद्वान् वनराज बि.के. महोदयः कृष्णराजनगरे स्थितस्य वेदान्तभारत्याः निर्देशकानां डा. श्रीधर भट्ट ऐनकै महाभागानां मार्गदर्शनेन “ಭಾಸನ ರೂಪಕಗಳಲ್ಲಿ ನಾಯಕರು-ಒಂದು ವಿಮರ್ಶಾತ್ಮಕ ಅಧ್ಯಯನ” इत्यस्मिन् विषये तुमकूरुविश्वविद्या-निलये संशोधनकर्मणि रतः ।)

ಈ ಭಾಷೆಯು ಭಾರತೀಯಸಾಹಿತ್ಯದ ಮೂಲಸ್ರೋತವಾಗಿದ್ದು ಸರ್ವ-ಭಾಷಾಜನನೀ ಎಂಬ ಖ್ಯಾತಿಯನ್ನು ಪಡೆದಿದೆ. ದೇವಾನುದೇವತೆಗಳ ವ್ಯಾವಹಾರಿಕ ಭಾಷೆಯೆಂದು ಸ್ತುತಿಸಲ್ಪಟ್ಟಿರುವುದರಿಂದ ಸಂಸ್ಕೃತವು ದೇವಭಾಷೆಯಾಗಿದೆ. ವೇದೋ-ಪನಿಷದಾದಿಗಳಿಂದಾಗಿ ಸಂಸ್ಕೃತವು ಪವಿತ್ರವೂ ಸನಾತನವೂ ಆಗಿದೆ. ವಿಸ್ತೃತವಾದ ವ್ಯವಸ್ಥಿತವಾದ ವ್ಯಾಕರಣದಿಂದ ಸಂಸ್ಕರಿಸಲ್ಪಟ್ಟು ಶ್ಲಿಷ್ಟವೂ ಶಿಷ್ಟವೂ ಆಗಿದೆ. ಅದ್ಭುತವಾದ ಅನಂತವಾದ ಸಾಹಿತ್ಯರಾಶಿಯಿಂದ ಅಲಂಕೃತವಾಗಿ ಹೃದ್ಯವಾಗಿದೆ. ಉಪಮಾದಿ ಅಲಂಕಾರಗಳಿಂದ ನಾನಾವಿಧವಾದ ರಸಾದಿ ಕಾವ್ಯಾಂಶಗಳಿಂದ ಭೂಯಿ-ಷ್ಠವಾದ ಸಂಸ್ಕೃತವು ಅತ್ಯಂತ ಮಧುರವಾಗಿದೆ. ಇಂತಹ ಸರ್ವಮಾನ್ಯವಾದ ಭಾಷೆಯ ಸಾಹಿತ್ಯ ಇಂದಿಗೂ ಪ್ರಸ್ತುತವೂ ಮಾರ್ಗದರ್ಶಕವೂ ಆಗಿದೆ.

***ಸಂಸ್ಕೃತಸಾಹಿತ್ಯ :-**

ವಿಶ್ವಸ್ತರದಲ್ಲಿ ಅಗ್ರಮಾನ್ಯವಾದ ಸಾಹಿತ್ಯಗಳಲ್ಲಿ ಪ್ರಸಿದ್ಧವಾದುದು ಸಂಸ್ಕೃತ ಭಾಷಾಸಾಹಿತ್ಯ. ಇದು ಅಗಾಧವೂ ಅನಂತವೂ ಆಗಿದೆ. ಸಂಸ್ಕೃತಸಾಹಿತ್ಯದಲ್ಲಿ ಇಲ್ಲದೇ ಇರುವ ವಿಷಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಸಂಸ್ಕೃತಸಾಹಿತ್ಯದ ಶ್ರೀಮಂತಿಕೆ ಇದೆ. ಆದಕಾರಣ ಸಂಸ್ಕೃತಸಾಹಿತ್ಯದ ವಿಚಾರಗಳು ಅಳತೆಗೆ ನಿಲುಕದ್ದಾಗಿವೆ. ಅಪರಿಮಿತ-ವಾದ ಈ ಸಾಹಿತ್ಯದಲ್ಲಿ ಮಾನವನು ತನ್ನ ಜೀವಿತಾವಧಿಯಲ್ಲಿ ಕೇವಲ ಅಣುಮಾತ್ರ-ವನ್ನು ಮಾತ್ರ ಆಸ್ವಾದಿಸಬಹುದು. ಭಾರತದ ಪರಮಪ್ರಮಾಣಭೂತವಾದ ವೇದ-ರಾಶಿಯು ಸಂಸ್ಕೃತಸಾಹಿತ್ಯದ ಮೂಲ. ಇದೇ ಕಿರೀಟಪ್ರಾಯವೂ ಹೌದು. ಜಗತ್ತಿಗೆ ಅಧ್ಯಾತ್ಮವಿದ್ಯೆಯನ್ನು ಬೋಧಿಸಿದ ಹಾಗೂ ಬೋಧಿಸುತ್ತಿರುವ ಉಪನಿಷತ್ತುಗಳು ಸಂಸ್ಕೃತಸಾಹಿತ್ಯದ ಕಾಣಿಕೆಗಳೇ. ಸರ್ವವಿಧವಾದ ಪ್ರವೃತ್ತಿನಿವೃತ್ತಿಗಳ ಮೂಲವಾದ ಪುರಾಣಗಳೂ ಸಂಸ್ಕೃತಸಾಹಿತ್ಯದ ಸಾರಗಳಾಗಿವೆ. ಜಗತ್ತಿನಲ್ಲಿಯೇ ತನ್ನ ಗಾತ್ರದಲ್ಲಿ ವಿಷಯವೈಶಾಲ್ಯದಲ್ಲಿ ದೊಡ್ಡದಾಗಿರುವ ನಾನಾವಿಧವಾದ ನೀತಿಬೋಧೆಗಳನ್ನು ಮಾಡು-ತ್ತಿರುವ ರಾಮಾಯಣಮಹಾಭಾರತಗಳು ಸಂಸ್ಕೃತಸಾಹಿತ್ಯದ ಎರಡು ಕಣ್ಣುಗಳಿದ್ದಂತೆ. ತದನಂತರ ಸಹೃದಯಹೃದಯಾಹ್ಲಾದನೆಗಾಗಿ ಪ್ರತಿಭಾಶಾಲಿಗಳಾದ ಕವಿಶ್ರೇಷ್ಠರಿಂದ ವಿರಚಿಸಲ್ಪಟ್ಟಂತಹ ಕಾವ್ಯರಾಶಿಗಳು ಸಾಹಿತ್ಯದ ಅಮೂಲ್ಯ ಕೊಡುಗೆಗಳಾಗಿವೆ. ಸಂಸ್ಕೃತಸಾಹಿತ್ಯವು ಮಾನವೀಯತೆಯ ವಿಶ್ವಸಮಾನತೆಯ ಮೂಲ ಜೀವಾತುವಾಗಿದೆ.

***ಸಂಸ್ಕೃತಸಾಹಿತ್ಯದ ವಿಧಗಳು :-**

ವಿಶ್ವಮಾನ್ಯವಾದ ಭಾರತಕ್ಕೆ ವಿಶ್ವಗುರುವಿನ ಪಟ್ಟವನ್ನು ನೀಡಿದಂತಹ ಅಮೂಲ್ಯವಾದ ಸಂಸ್ಕೃತ ಸಾಹಿತ್ಯವನ್ನು ಪ್ರಧಾನವಾಗಿ ದೃಶ್ಯ, ಶ್ರವ್ಯ, ಚಂಪೂ-ರೂಪದಲ್ಲಿ ಮೂರು ವಿಧವಾಗಿ ವಿಂಗಡಿಸಲಾಗಿದೆ. ಎಲಾ ರೀತಿಯ ಕಾವ್ಯತತ್ತ್ವಗಳಿಂದ ಕೂಡಿದ್ದರೂ ರಸಭಾವಾದಿಕಾವ್ಯಾಂಶಗಳಿದ್ದರೂ ನೋಡುವುದರಿಂದಲೆ ಹೆಚ್ಚಿನ ಆಹ್ಲಾದ-ವನ್ನು ನೀಡುವಂತ ಸಂಸ್ಕೃತಸಾಹಿತ್ಯಪ್ರಕಾರವೇ ದೃಶ್ಯಕಾವ್ಯ. ಹಾಗೆಯೇ ಕೇಳು-ವಿಕೆಯೇ ಪ್ರಧಾನವಾಗಿರುವ ಸಾಹಿತ್ಯಪ್ರಕಾರವೇ ಶ್ರವ್ಯ. ಈ ಎರಡರ ಕ್ರಮಬದ್ಧವಾದ ಸಮ್ಮಿಲನವೇ ಚಂಪೂಕಾವ್ಯ

***ದೃಶ್ಯಕಾವ್ಯಗಳು-**

'कवेः कर्मकाव्यम्' ಎಂಬ ನಿಷ್ಪತ್ತಿಯಂತೆರಚನೆಯಾದ ಕಾವ್ಯಗಳ ಮಹಾ

ಪ್ರಪಂಚವೇ ಇಂದು ಗೋಚರಿಸುತ್ತದೆ. 'काव्यं यशसे अर्थकृते व्यवहारविद शिवेतरक्षतये सद्यःपरनिर्वृतये कान्तासंमिततयोपदेशयुजे' ಎಂಬಿತ್ಯಾದಿ ಪ್ರಯೋಜನ-ಗಳನ್ನು ಆಕಾಂಕ್ಷಿಸಿ ನಿರ್ಮಿತವಾದ ಕಾವ್ಯ, ಸಾಹಿತ್ಯ ಪ್ರಪಂಚ ಸದಾ ಕಾಲವೂ ಸಹೃದಯರ ಹೃದಯಕ್ಕೆ ಕಾಂತಾಸಮ್ಮಿತವಾಗಿ ತಂಪೆರೆಯುತ್ತದೆ.

ಸಂಸ್ಕೃತಕಾವ್ಯ ಸಾಹಿತ್ಯವನ್ನು ದೃಶ್ಯ ಹಾಗೂ ಶ್ರವ್ಯ ಕಾವ್ಯಗಳೆಂದು ಪ್ರಧಾನ-ವಾಗಿ ಎರಡು ಭಾಗ ಮಾಡಲಾಗಿದೆ. ಶ್ರವ್ಯ ಕಾವ್ಯಗಳನ್ನು ಪುನಃ ಗದ್ಯ, ಪದ್ಯ ಮತ್ತು ಚಂಪೂ ಕಾವ್ಯಗಳೆಂದು ಮೂರು ವಿಧವಾಗಿ ವಿಭಾಗಿಸಲಾಗಿದೆ. ಪದ್ಯಸಾಹಿತ್ಯದಲ್ಲಿ ಪುನಃ ಮಹಾಕಾವ್ಯಗಳು ಮತ್ತು ಖಂಡಕಾವ್ಯಗಳೆಂಬ ಎರಡು ಪ್ರಧಾನ ಪ್ರಕಾರಗಳಿವೆ. ಈ ಖಂಡಕಾವ್ಯಗಳಲ್ಲಿ ಪುನಃ ಪ್ರೇಮಕಾವ್ಯ, ದೂತಕಾವ್ಯ ಮುಂತಾದ ಉಪ ವಿಭಾಗಗಳಿವೆ. ಈ ಖಂಡಕಾವ್ಯಗಳಲ್ಲಿ ಮೇಘದೂತ, ಋತುಸಂಹಾರ ಇತ್ಯಾದಿ ಕಾವ್ಯಗಳು ಪ್ರಖ್ಯಾತ-ವಾಗಿವೆ. ಕಣ್ಣಿನಿಂದ ನೋಡಿ ಆನಂದಿಸಬಹುದಾದ ಕಾವ್ಯಪ್ರಕಾರಗಳಿಗೆ ದೃಶ್ಯಕಾವ್ಯ ಗಳೆಂದು ಹೆಸರು. ಇಲ್ಲಿ ಕೇಳುವಿಕೆಯಿದ್ದರೂ ನೋಟವೇ ಪ್ರಧಾನವಾಗಿರುತ್ತದೆ. ಆದ ಕಾರಣ ರೂಪಕಗಳು ಮತ್ತು ಉಪರೂಪಕಗಳು ದೃಶ್ಯಕಾವ್ಯಗಳಲ್ಲಿ ಅಂತರ್ಭಾವವನ್ನು ಹೊಂದುತ್ತವೆ. ಅಭಿನಯದ ಮೂಲಕ ವಸ್ತುವಿಶೇಷವನ್ನು ಅಥವಾ ವ್ಯಕ್ತಿವಿಶೇಷವನ್ನು ಬಿಂಬಿಸಿ ಸಹೃದಯರನ್ನು ರಂಜಿಸುವುದೇ ನಾಟಕಾದಿ ದೃಶ್ಯಕಾವ್ಯಗಳ ಉದ್ದೇಶವಾಗಿ-ರುತ್ತದೆ. ಹಿಂದಿನಕಾಲದಲ್ಲಿ ಜನರಿಗೆ ರೂಪಕಗಳೇ ಏಕಮಾತ್ರ ಮನೋರಂಜನೆಯ ಸಾಧನಗಳಾಗಿದ್ದವು. ಆದ್ದರಿಂದಲೇ ಕಾಳಿದಾಸನು-

**"ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್"**

ಎಂದು ರೂಪಕವನ್ನು ಕೊಂಡಾಡಿದ್ದಾನೆ. ಪ್ರಧಾನವಾಗಿ ಸಂಸ್ಕೃತಸಾಹಿತ್ಯ-ದಲ್ಲಿ ಹತ್ತು ವಿಧವಾದ ರೂಪಕಗಳಿವೆ. ಹದಿನೆಂಟು ವಿಧವಾದ ಉಪರೂಪಕಗಳಿವೆ.

*** ಭಾಸ :-**

ಸುರಭಾರತಿಯ ಸಾಹಿತ್ಯ ಸಿಂಹಾಸನವನ್ನು ಅಲಂಕರಿಸಿದ ವ್ಯಾಸ, ಕಾಳಿ-ದಾಸ, ಬಾಣ, ಭವಭೂತಿ ಮುಂತಾದ ಕವಿಗಳ ನಡುವೆ ಅತ್ಯಂತ ಶೋಭಾಯ-ಮಾನನಾಗಿ ಬೆಳಗುವ ಮತ್ತೋರ್ವ ಕವಿ ಎಂದರೆ ರೂಪಕಸಾಮ್ರಾಜ್ಯದ ಚಕ್ರವರ್ತಿ ಭಾಸ. ಇವನ ಜೀವಿತಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಹ ಇವನ ಕಾಲ ಕ್ರಿ.ಶ. 4 ಅಥವಾ ಕ್ರಿ. ಪೂ. ಪ್ರಥಮ ಶತಮಾನ ಎಂಬುದಾಗಿ ಎರಡು ವಿಕಲ್ಪಗಳು ಅಂಗೀಕರಿಸಲ್ಪಟ್ಟಿವೆ. ಇವನು ಮಹಾಕವಿ ಕಾಳಿದಾಸನ ಪೂರ್ವವರ್ತಿ-ಯಾಗಿದ್ದನು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಭಾಸನು ರಾಮಾಯಣವನ್ನು ಆಧಾರವಾಗಿ ಇಟ್ಟುಕೊಂಡು ಮೂರು, ಮಹಾಭಾರತದ ಆಧಾರದ ಮೇಲೆ ಆರು, ಭಾಗವತದ ಆಧಾರದ ಮೇಲೆ ಒಂದು ಹಾಗೂ ಬೃಹತ್ಕಥೆಯ ಆಧಾರದಲ್ಲಿ ಎರಡು ಹಾಗೂ ಸ್ವಯಂ ಪ್ರತಿಭೆಯಿಂದ ಎರಡು ಒಟ್ಟಾಗಿ ಹದಿನಾಲ್ಕು ರೂಪಕಗಳನ್ನು ರಚಿಸಿದ್ದಾನೆ.

***ರಸಗಳು :-**

ಕಾವ್ಯದ ಅತ್ಯಂತ ಪ್ರಧಾನವಾದ ಅಂಗಗಳಲ್ಲಿ ಒಂದು ರಸ. ಖಾದ್ಯವಸ್ತುಗಳಲ್ಲಿ ಹೇಗೆ ರಸವು ಅತ್ಯಂತಪ್ರಧಾನವೋ ಹಾಗೆಯೇ ಕಾವ್ಯಗಳಲ್ಲಿ ರಸವು ಬಹಳ ಪ್ರಮುಖ

ವಾದುದು. ರಸವಿಹೀನವಾದ ಆಹಾರವೂ ಹೇಗೆ ಖಾದ್ಯಯೋಗ್ಯವಲ್ಲವೋ ಹಾಗೆಯೇ ರಸರಹಿತವಾದ ಕಾವ್ಯವು ಸಹೃದಯರಿಗೆ ಹಿಡಿಸುವುದಿಲ್ಲ. ಆದ್ದರಿಂದ ರಸವು ಕಾವ್ಯಾಂ-ಶಗಳಲ್ಲಿ ಪ್ರಧಾನತಮವಾಗಿದೆ. ಇಂತಹ ರಸವನ್ನು ಕಾವ್ಯಜ್ಞಾನಿಗಳು ಆತ್ಮ, ಸಾರ ಮುಂತಾದ ರೀತಿಯಲ್ಲಿ ವರ್ಣಿಸಿದ್ದಾರೆ. ರಸವು ವಿಭಾವಿ ಅನುಭಾವಿ ಮತ್ತು ವ್ಯಭಿ-ಚಾರಿಭಾವಗಳ ಸಮ್ಮಿಶ್ರಣದಿಂದ ಉಂಟಾಗುತ್ತದೆ ಎಂದು ಕಾವ್ಯವಿದರ ಅಭಿಪ್ರಾಯ-ವಾಗಿದೆ

***ರಸದ ಭೇದಗಳು :-**

ಇಂತಹ ರಸಗಳು ಶೃಂಗಾರ, ಹಾಸ್ಯ, ಕರುಣ, ರೌದ್ರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಮತ್ತು ವೀರಎಂಬುದಾಗಿ ಒಂಬತ್ತು ವಿಧ. ಅದನ್ನೇ ಕಾವ್ಯಶಾಸ್ತ್ರಗಳಲ್ಲಿ

शृङ्गारहास्यकरुणारौद्रवीरभयानकाः ।
बीभत्साद्भुतशान्ताश्चरसापूर्वैरुदाहृताः ॥[1]

ಎಂದು ಹೇಳಲಾಗಿದೆ. ರಸಜ್ಞರಾದ ಕವಿಗಳು ನವರಸಗಳನ್ನು ಸಂದರ್ಭೋಚಿತವಾಗಿ ಬಳಸಿ ಸಹೃದಯರನ್ನು ರಂಜಿಸುತ್ತಾರೆ. ಇವಲ್ಲದೆ ವಾತ್ಸಲ್ಯ ಭಕ್ತಿ ಮುಂತಾದ ಆನು-ಷಂಗಿಕ ರಸಗಳನ್ನೂ ಕಾವ್ಯಶಾಸ್ತ್ರವಿದರು ಅಂಗೀಕರಿಸಿದ್ದಾರೆ.

***ಭಾಸನ ರೂಪಕಗಳಲ್ಲಿ ರಸಗಳು :-**

ಭಾಸನ ಹದಿನಾಲ್ಕು ರೂಪಕಗಳು ರಸಸ್ಯಂದಿಗಳಾಗಿವೆ. ಪ್ರಧಾನವಾದ ರಸಗಳ ಜೊತೆ ಆನುಷಂಗಿಕ ರಸಗಳ ಪೋಷಣೆಯನ್ನು ಮಾಡಿ ಭಾಸನುರಸದೌತಣ-ವನ್ನು ಉಣಬಡಿಸಿದ್ದಾನೆ. ದೂತವಾಕ್ಯದಲ್ಲಿ ವೀರ ಮತ್ತು ಅದ್ಭುತ ರಸಗಳು ಪ್ರಧಾನ-ವಾಗಿವೆ. ಕರ್ಣಭಾರದಲ್ಲಿ ಕರುಣ ಮತ್ತು ವೀರರಸಗಳು ಮುಖ್ಯವಾಗಿವೆ. ಮಧ್ಯಮ-ವ್ಯಾಯೋಗದಲ್ಲಿ ಬೀಭತ್ಸವನ್ನು ಬಿಟ್ಟು ಉಳಿದೆಲ್ಲಾ ರಸಗಳು ಸಮಾನವಾಗಿವೆ. ಬಾಲ-ಚರಿತದಲ್ಲೂ ವೀರಾದಿರಸಗಳು ಪ್ರಧಾನವಾಗಿವೆ. ಅಭಿಷೇಕನಾಟಕದಲ್ಲಿ ವೀರ, ಕರುಣ, ಅದ್ಭುತ, ಭಯಾನಕ ಹಾಗೂ ವಾತ್ಸಲ್ಯ ರಸಗಳು ಮುಖ್ಯಭೂಮಿಕೆಯಲ್ಲಿವೆ. ಪಂಚ-ರಾತ್ರದಲ್ಲಿ ವೀರ, ಹಾಸ್ಯ, ಮತ್ತು ವಾತ್ಸಲ್ಯಗಳು ಪ್ರಮುಖವಾಗಿವೆ. ದೂತ-ಘಟೋತ್ಕಚದಲ್ಲಿ ಕರುಣ ಮತ್ತು ವೀರರಸಗಳು ಅಂಗೀರಸಗಳಾಗಿವೆ. ಊರುಭಂಗ-ದಲ್ಲಿ ಕರುಣ, ವೀರ, ರೌದ್ರ, ಮತ್ತು ಶಾಂತ ರಸಗಳು ಪ್ರಧಾನತೆಯನ್ನು ಪಡೆದಿವೆ. ಅವಿಮಾರಕದಲ್ಲಿ ಶೃಂಗಾರ, ಹಾಸ್ಯ, ಕರುಣ, ಅದ್ಭುತ ಹಾಗೂ ಭಯಾನಕ ರಸಗಳೇ ಪ್ರಧಾನವಾದವುಗಳು. ಪ್ರತಿಮಾನಾಟಕದಲ್ಲಿ ವೀರ, ಕರುಣ, ಶೃಂಗಾರ ಹಾಗೂ ಹಾಸ್ಯ ರಸಗಳಿವೆ. ಪ್ರತಿಜ್ಞಾಯೌಗಂಧರಾಯಣದಲ್ಲಿ ವೀರ, ಅದ್ಭುತ, ಹಾಸ್ಯ ಮತ್ತು ಶೃಂಗಾರ ರಸಗಳಿವೆ. ಸ್ವಪ್ನವಾಸದತ್ತದಲ್ಲಿ ಮುಖ್ಯವಾಗಿ ಶೃಂಗಾರ ಮತ್ತುಕರುಣ ರಸಗಳಿವೆ. ಚಾರುದತ್ತದಲ್ಲಿಕರುಣ, ಹಾಸ್ಯ ಮತ್ತು ಶೃಂಗಾರ ರಸಗಳಿವೆ. ಕೆಲವೊಂದು ರಸ-ಸನ್ನಿವೇಶವಿಶೇಷಗಳನ್ನು ಸ್ಥಾಲೀಪುಲಾಕನ್ಯಾಯಾನುಸಾರದಲ್ಲಿ ಇಲ್ಲಿ ನೀಡಲಾಗಿದೆ.

***ವೀರರಸ :-**

ವೀರರಸವನ್ನು ಯುದ್ಧವೀರರಸ, ಧರ್ಮವೀರರಸ ಹಾಗೂ ದಯಾವೀರರಸ ಎಂಬುದಾಗಿ ವಿಂಗಡಿಸಲಾಗಿದೆ. ಭಾಸನ ರೂಪಕಗಳಲ್ಲಿ ಈ ಮೂರೂ ಪ್ರಕಾರಗಳನ್ನು ಕಾಣಬಹುದು.

* ಯುದ್ಧವೀರರಸ–

ಯುದ್ಧವೀರರಸವನ್ನುರಾಮರಾವಣರ, ದುರ್ಯೋಧನ–ಭೀಮರ, ಅಭಿಮನ್ಯು–ವಿರಾಟರ ಹಾಗೂ ಉದಯನ–ಮಹಾಸೇನರ ಮಧ್ಯೆ ನಡುವೆ ನಡೆಯುವ ಯುದ್ಧದ ಸನ್ನಿವೇಶಗಳಲ್ಲಿ ಕಾಣಬಹುದು. ಇದಲ್ಲದೇ ಜಟಾಯು–ರಾವಣರ ಮಧ್ಯೆ ಕೂಡ ಯುದ್ಧವೀರರಸದ ಪೋಷಣೆಯಿದೆ.

* ಧರ್ಮವೀರರಸ–

ಭಾಸ ವೇದದ ತತ್ತ್ವಗಳನ್ನು ರೂಪಕಗಳಲ್ಲಿ ಅಳವಡಿಸಿದ್ದಾನೆ. ಉಪ–ನಿಷತ್ತಿಗಳ ಧಾರ್ಮಿಕೋಪದೇಶಗಳನ್ನು ಕೂಡಾ ನಾವು ಕಾಣಬಹುದು. ಪ್ರತಿಮಾ–ನಾಟಕದಲ್ಲಿ ರಾಮನ ವನಗಮನಚಿತ್ರಣ, ಅವನ ಪಿತೃವಿನಲ್ಲಿ ದೇವತ್ವದರ್ಶನ ಧರ್ಮವೀರರಸವಾಗಿದೆ. ಹಾಗೆಯೇ ಮಧ್ಯಮವ್ಯಾಯೋಗದಲ್ಲಿ ಘಟೋತ್ಕಚನ ಪಿತೃ ಭಕ್ತಿ, ಪಂಚರಾತ್ರದಲ್ಲಿ ದುರ್ಯೋಧನನ ದ್ರೋಣನಲ್ಲಿರುವ ಗುರುಭಕ್ತಿ, ಚಾರುದತ್ತದಲ್ಲಿ ಚಾರುದತ್ತನ ಅತಿಥಿದೇವತ್ವಗುಣ ಮುಂತಾದ ಕಡೆಗಳಲ್ಲಿ ಧರ್ಮವೀರರಸದ ಚಿತ್ರಣವಿದೆ.

* ದಯಾವೀರರಸ–

ಪಂಚರಾತ್ರದಲ್ಲಿ ದ್ರೋಣನು ಕೌರವರಲ್ಲಿ ದಯೆತೋರಿ ಪಾಂಡವರಿಗೆ ಅರ್ಧರಾಜ್ಯ ಕೊಡುವಂತೆ ನಿರ್ದೇಶಿಸುತ್ತಾನೆ. ಇದೂ ದಯಾವೀರರಸದ ಉದಾ–ಹರಣೆ. ಅಂತೆಯೇ ಕರ್ಣಭಾರದಲ್ಲಿ ಕರ್ಣನು ಬ್ರಾಹ್ಮಣನ ವಿಷಯದಲ್ಲಿ ದಯಾಮಯನಾಗಿ ವರ್ತಿಸುತ್ತಾನೆ.

*ಅದ್ಭುತರಸ :–

ಭಾಸನ ರೂಪಕಗಳಲ್ಲಿ ಬಹಳಷ್ಟು ಕಡೆ ಅದ್ಭುತರಸದ ಪೋಷಣೆಯನ್ನು ಕಾಣಬಹುದು. ಅವಿಮಾರಕದಲ್ಲಿ ವಿದ್ಯಾಧರನು ಅವಿಮಾರಕನಿಗೆ ಅದೃಶ್ಯವಾದ ಉಂಗುರವನ್ನು ನೀಡುವ ಸನ್ನಿವೇಶವಿದೆ. ( एतदङ्गुलीयकं दक्षिणाङ्गुल्याधारयन् अदृश्योभवतिवामेन प्रकृतिस्थः[2]) ದೂತವಾಕ್ಯದಲ್ಲಿ ದುರ್ಯೋಧನನು ಶ್ರೀಕೃಷ್ಣನು ಪಾಶದಿಂಡ ಬಂಧಿಸಲು ಪ್ರಯತ್ನಿಸುವಾಗ ಅವನು ವಿಶ್ವರೂಪವನ್ನು ಧರಿಸುತ್ತಾನೆ. ಕ್ಷಣಮಾತ್ರದಲ್ಲಿ ಸಾಸಿವೆಯ ಗಾತ್ರದಷ್ಟು ಚಿಕ್ಕವನಾಗುತ್ತಾನೆ. ಹಾಗೆಯೇ ಬಾಲಚರಿತದಲ್ಲಿ ಶಾಪ ಹಾಗು ಶುಭಶಕುನಗಳು ಮೂರ್ತರೂಪದಲ್ಲಿ ಕಂಸನ ಬಳಿ ಪ್ರತ್ಯಕ್ಷವಾಗುವ ಸನ್ನಿವೇಶವಿದೆ. ಶ್ರೀಕೃಷ್ಣನ ಬಾಲಲೀಲೆಯ ವರ್ಣನೆಯೆಲ್ಲವೂ ಅದ್ಭುತರಸದಲ್ಲಿಯೇ ಇವೆ. ಅಭಿಷೇಕನಾಟಕದಲ್ಲಿ ಶ್ರೀರಾಮನಿಗೆ ಸಮುದ್ರರಾಜನು ಸ್ವತಃದಾರಿ ಬಿಡುವ (रिपुमर्द्धतुमुद्यन्तंमामयंसक्तसायकम् ।सजीवमद्य तंकर्तुंनिवारयतिसागरः॥)[3] ಸನ್ನಿವೇಶವೂ ಅದ್ಭುತದ ಪರಿಕಲ್ಪನೆ.

*ರೌದ್ರರಸ :–

ಪ್ರತಿಮಾನಾಟಕದಲ್ಲಿ ಭರತನುರಾಮನ ವನಗಮನಕ್ಕೆ ಕಾರಣಳಾದ ತಾಯಿಯಾದ ಕೈಕೇಯಿಯ ಕುರಿತು ರೌದ್ರಾವತಾರವನ್ನು ತಾಳಿ ತಾಯಿಯೇಅಲ್ಲಎನ್ನುವ ಸನ್ನಿವೇಶವಿದೆ. (भर्तृद्रोहादस्तुमाताप्यमाता ।[4] गङ्गायमुनयोर्मध्ये

कुनदीव प्रवेशिता[5]) ಹೀಗೆಯೇ ಊರುಭಂಗದಲ್ಲಿ ಪಾಂಡವರ ಬಗ್ಗೆ ಅಶ್ವತ್ಥಾಮನ ರೌದ್ರಾವತಾರ (कृष्णां सपाण्डुतनयं युधिशस्त्रजालैः । सङ्कीर्णलेख्यमिव चित्रपटं क्षिपामि)[6], ಪಂಚರಾತ್ರದಲ್ಲಿ ಶಕುನಿ ದ್ರೋಣನನ್ನುಧಾರ್ಮಿಕ ಮೋಸಗಾರ (यदप्रस्तुतमुत्पाद्य युक्तेयं धर्मवञ्चना[7]) ಎನ್ನುವ ಪ್ರಸಂಗ ಮತ್ತು ಅಭಿಷೇಕ ನಾಟಕದಲ್ಲಿ ಹನುಮಂತನು ರಾವಣನನ್ನು ಕುರಿತು ರೌದ್ರಾವತಾರ ತಾಳುವುದು ರೌದ್ರದಅದ್ಭುತವಾದ ಉದಾಹರಣೆ.

***ಕರುಣರಸ :–**

ಸ್ವಪ್ನವಾಸವದತ್ತದಲ್ಲಿ ವಾಸದತ್ತೆ ಮತ್ತು ಕುರಂಗಿಯರು ಪತಿಯರಿಂದ ಬೇರಾದಾಗ ತೋರಿಸಿದ ಶೋಕ, ಉದಯನನು ವಾಸದತ್ತೆಯ ವಿರಹದಲ್ಲಿ ಕರುಣಾಪೂರ್ಣನಾದುದು, ಊರುಭಂಗದಲ್ಲಿ ತಂದೆತಾಯಿಯರಿಗೆ ನಮಸ್ಕರಿಸಲು ಆಗದಿದ್ದಾಗ ದುರ್ಯೋಧನನ ವಿಲಾಪ, ಪ್ರತಿಮಾನಾಟಕದಲ್ಲಿ ರಾಮನ ವನಗಮನ-ದಿಂದ ದಶರಥನ ವಿಲಪನ, ಅಭಿಷೇಕನಾಟಕದಲ್ಲಿ ಸೀತಾಹನುಮಂತರ ಸಂವಾದ, ಕರ್ಣಭಾರದಲ್ಲಿ ಕರ್ಣನ ವಿಲಾಪ ಮುಂತಾದ ಕಡೆಗಳಲ್ಲಿ ಕರುಣರಸವು ಭರಪೂರವಾಗಿ ಚಿತ್ರಿಸಲ್ಪಟ್ಟಿದೆ.

***ಭಯಾನಕರಸ :–**

ಬಾಲಚರಿತದಲ್ಲಿ ಶಾಪವು ಕರಾಳವಾದ ಮೂರ್ತರೂಪದಲ್ಲಿ (श्मशान मध्यादहमागतोऽस्मि चण्डालवेषेण विरूपचण्डम् । कपालमालातिविचित्रवेषः कंसस्य राज्ञो हृदयं प्रवेष्टुम् ॥[8]) ಕಂಸನ ಶಯನಗೃಹವನ್ನು ಪ್ರವೇಶಿಸುತ್ತದೆ. ಊರುಭಂಗದಲ್ಲಿ ಕುರುಕ್ಷೇತ್ರದ ಭಯಾನಕ ಚಿತ್ರಣವಿದೆ. (एतद्रणं हतगजाश्वनरेन्द्रयोधं सङ्कीर्णलेख्यमिव चित्रपटं प्रविद्धम् ॥[9]) ಮಧ್ಯಮವ್ಯಾಯೋಗದಲ್ಲಿ ಘಟೋತ್ಕಚನ ಸ್ವರೂಪದ (सजल जलदगात्रः पद्मपत्रायताक्षः मृगपतिगतिलीलः राक्षसः प्रोग्रदंष्ट्रः[10]) ವರ್ಣನೆ. ಈ ಮುಂತಾದ ಕಡೆಗಳಲ್ಲಿ ಭಯಾನಕರಸದ ಪೋಷಣೆಯಿದೆ.

***ಶಾಂತರಸ :–**

ಕರ್ಣಭಾರದಲ್ಲಿ ಇಂದ್ರನು ಕರ್ಣನನ್ನು ಮೋಸಗೊಳಿಸಿದ ಬಗ್ಗೆ ಶಲ್ಯನು ಹೇಳಿದಾಗ ಕರ್ಣನು ಸಾವಿರಾರು ಜನರಿಗೆ ದಾನಕೊಡುವ ಇಂದ್ರನಿಗೇ ನಾನು ದಾನಕೊಟ್ಟೆ ಎಂಬುದಾಗಿ ಶಾಂತಸ್ವಭಾವವನ್ನು ಪ್ರದರ್ಶಿಸುತ್ತಾನೆ. ಊರುಭಂಗದಲ್ಲಿ ಸಾವು ಸನ್ನಿಹಿತವಾದಾಗ ದುರ್ಯೋಧನನು ಶಾಂತನಾಗುತಾನೆ. ಅಭಿಷೇಕನಾಟಕದಲ್ಲಿ ಸೀತೆಯ ಅಗ್ನಿಪ್ರವೇಶದ ನಂತರ ರಾಮನ ವಿಶ್ವಾಸಪೂರ್ಣ ವಚನದಲ್ಲಿ ಶಾಂತತೆ ಪ್ರತಿಧ್ವನಿಸುತ್ತದೆ. ಮರಣದ ಸಮೀಪ ಇರುವಾಗ ವಾಲಿಯೂ ಶಾಂತನಾಗಿ ರಾಮನನ್ನು ಮೋಕ್ಷಕ್ಕಾಗಿ ಬೇಡುತ್ತಾನೆ.

***ಶೃಂಗಾರರಸ :–**

ಶೃಂಗಾರರಸದಎಲ್ಲಾ ಪ್ರಕಾರಗಳಲ್ಲೂ ಪೋಷಣೆಯನ್ನು ಭಾಸನು ಮಾಡಿದ್ದಾನೆ.

* ಧರ್ಮಶೃಂಗಾರ– ಪ್ರತಿಮಾ ಮತ್ತು ಅಭಿಷೇಕ ನಾಟಕಗಳಲ್ಲಿ ಸೀತಾ ಹಾಗೂ

ರಾಮರ ಪ್ರೀತಿಯ ವರ್ಣನೆ.

* ಕಾಮಶೃಂಗಾರ– ಸ್ವಪ್ನವಾಸದತ್ತದಲ್ಲಿ ವಾಸವದತ್ತೆ ಮತ್ತು ಉದಯನರ, ಹಾಗೂ ಅವಿಮಾರಕದಲ್ಲಿ ಅವಿಮಾರಕ ಮತ್ತು ಕುರಂಗಿಯರ ಮಧ್ಯೆ ಇದ್ದ ಪ್ರೀತಿ.
* ಅರ್ಥ ಶೃಂಗಾರ–ಉದಯನ ಮತ್ತು ಪದ್ಮಾವತಿಯರ ವಿವಾಹದ ಚಿತ್ರಣ.
* ಮುಗ್ಧಶೃಂಗಾರ– ಮಧ್ಯಮವ್ಯಾಯೋಗದಲ್ಲಿ ಪರೋಕ್ಷವಾಗಿ ಬರುವ ಭೀಮ ಮತ್ತು ಹಿಡಿಂಬೆಯರ ಪ್ರೀತಿ.
* ಮೂಢ ಶೃಂಗಾರ–ಚಾರುದತ್ತದಲ್ಲಿ ವಸಂತಸೇನೆಯ ಬಗ್ಗೆ ಶಕಾರನ ನುಡಿಗಳು.

***ಹಾಸ್ಯರಸ :–**

ಪ್ರತಿಜ್ಞಾಯೌಗಂಧರಾಯಣದಲ್ಲಿ ಯೌಗಂಧರಾಯಣ ಮತ್ತು ವಸಂತಕರ, ಚಾರುದತ್ತದಲ್ಲಿ ಶಕಾರನ, ಮಧ್ಯಮವ್ಯಾಯೋಗದಲ್ಲಿ ಕೇಶವದಾಸ ಮತ್ತು ಘಟೋತ್ಕಚರ, ಬಾಲಚರಿತದಲ್ಲಿ ನಾರದರ, ಅವಿಮಾರಕದಲ್ಲಿ ಮಾಗಧಿಕ ಮತ್ತು ಕುರಂಗಿಯರ ಸಂವಾದಗಳಲ್ಲಿ ಹಾಸ್ಯರಸವು ಅಧಿಕವಾಗಿದೆ. ಇದಲ್ಲದೇ ಅನೇಕ ಕಡೆ ಹಾಸ್ಯರಸವು ಅತಿಶಯವಾಗಿ ಪೋಷಿಸಲ್ಪಟ್ಟಿದೆ. ಭಾಸನು ವಿಶೇಷವಾದ ಪ್ರಾತಿನಿಧ್ಯವನ್ನು ಹಾಸ್ಯರಸಕ್ಕೆ ನೀಡಿದ್ದಾನೆ.

***ಉಪಸಂಹಾರ :–**

ಭಾಸನ ರಸಪೋಷಣೆ ಅನನ್ಯವಾದುದು. ಎಲ್ಲಾ ವಿಧವಾದ ರಸಗಳನ್ನು ಬಳಸಿದ್ದರೂ ಸಹೃದಯರಿಗೂ ಪಾಮರರಿಗೂ ಪಂಡಿತರಿಗೂ ಇಷ್ಟವಾಗುವ ರೀತಿಯಲ್ಲಿ ರೂಪಕಗಳನ್ನು ರಚಿಸಿದ್ದಾನೆ. ವಿಸ್ತರಭಯದಿಂದ ಅತ್ಯಲ್ಪಮಾತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**ವಿದ್ವಾನ್ ವನರಾಜ ಬಿ. ಕೆ.,**
ಸಹಾಯಕ ಪ್ರಾಧ್ಯಾಪಕರು,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಪಂಪಮಹಾಕವಿ ರಸ್ತೆ,
ಚಾಮರಾಜ ಪೇಟೆ,
ಬೆಂಗಳೂರು–560018,
ಕರ್ನಾಟಕ
ಚರದೂರವಾಣಿ : 9901731524

********



Jyotishashastra-Dharmashastra Vidwan

**Dr. Gopalkrishna Hegde**

Director and Chief-Editor

The Journal of Veda Samskrita Academy is an ISSN 2250-1711 numbered Bi-Annual National Refereed Research Journal dedicated to indological pursuits published by the Veda Samskrita Academy, Hegde. One of the objectives of the Veda Samskrita Academy, Hegde, is to encourage researchers and scholars to publish the results of their research in the form of a research paper in Samskrita / English / Hindi / Kannada. Accordingly, contributions from scholars working in different fields like Literature, Grammar, Philosophy, all branches of Vedas, Vedangas, Darshanas and Shiksha Shastras and so on are highly welcome. However, good and original but brief creative writings in Samskrita in the form of poetry, prose, stories etc. would also equally be welcome. Regular issue of the Journal will contain research papers and small literacy pieces, book reviews, discussions and comments on research publications.

The Academy would also invite high standard research papers from well known eminent scholars. Other research papers submitted by research scholars would be reviewed and refereed by eminent scholars in the relevant field. Only such research papers reviewed by referees will be finally accepted for publication.

